# ಶ್ರೀಮಾತೆಯವರ ನೆನಪು

ಮೂಲ ಬಂಗಾಳಿ : **ನಿರ್ಝರಿಣೀ ಸರ್ಕಾರ್** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ನಿರ್ಝರಿಣೀ ಸರ್ಕಾರ್ (೧೮೯೪–೧೯೬೩) ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದ ಶಿಷ್ಯೆಯಾಗಿದ್ದರು. ಒಂದು ದಿನ ಶ್ರೀಮಾತೆಯವರು ಅತ್ಯಂತ ಪ್ರೀತಿಯಿಂದ ಆಕೆಯನ್ನು ಕೇಳಿದ್ದರು: ''ನೀನು ಮಂತ್ರದೀಕ್ಷೆ ಪಡೆದುಕೊಳ್ಳುವಿಯೇನು?'' ಶ್ರೀಮಾತೆಯವರಿಂದ ಕೇಳದೆಯೇ ಲಭಿಸಿದ ಈ ಕರುಣೆಯಿಂದಾಗಿ ಆಕೆ ಭಾವಾವಿಷ್ಟರಾಗಿದ್ದರು. ಅಂದೇ ಅವರ ದೀಕ್ಷೆಯಾಯಿತು. ನಿರ್ಝರಿಣಿಯವರ ತಾಯಿ ಸರಳಬಾಲಾ ಸರ್ಕಾರ್, ಹಾಗೂ ಪತಿ 'ಆನಂದ ಬಜಾರ್ ಪತ್ರಿಕೆಯ' ಸ್ಥಾಪಕ ಹಾಗೂ ಸಂಪಾದಕರಾಗಿದ್ದ ಪ್ರಫುಲ್ಲ ಕುಮಾರ್ ಸರ್ಕಾರ್. ಅವರ ಮಗ ಅಶೋಕಕುಮಾರ್ ಸರ್ಕಾರ್ ಕೂಡಾ ಆನಂದ ಬಜಾರ್ ಪತ್ರಿಕೆಯ ಸಂಪಾದಕರಾಗಿದ್ದರು. ನಿರ್ಝರಿಣೀ ಸರ್ಕಾರ್ ದೇಶಭಕ್ತೆಯೂ ಒಳ್ಳೆಯ ಲೇಖಕಿಯೂ ಆಗಿದ್ದರು. ತಮ್ಮ ತಾಯಿಯಿಂದ ಬರವಣಿಗೆಗೆ ಹಾಗೂ ಸೋದರಿ ನಿವೇದಿತಾ ಅವರಿಂದ ದೇಶಭಕ್ತಿಗೆ ಪ್ರೇರಣೆಯನ್ನು ಪಡೆದರು. ಅವರು ಸೋದರಿ ನಿವೇದಿತಾ ವಿದ್ಯಾಲಯದ ವಿದ್ಯಾರ್ಥಿನಿಯೂ ಆಗಿದ್ದರು. ಅಲ್ಲಿ ಪಡೆದ ಶಿಕ್ಷಣವು ಅವರ ಮುಂದಿನ ಜೀವನದ ಮೇಲೆ, ಅವರ ಸ್ವಭಾವ ಹಾಗೂ ಕಾರ್ಯಚಟುವಟಿಕೆಗಳ ಮೇಲೆ ಅಗಾಧ ಪ್ರಭಾವವನ್ನುಂಟುಮಾಡಿತ್ತು. ಕವಿ ರವೀಂದ್ರನಾಥ ಠಾಕೂರರು ಕೂಡ ಅವರ ಸ್ನೇಹಕ್ಕೆ ಪಾತ್ರರಾಗಿದ್ದರು. *(–ಸಂ.)*

ನಾನು ಶ್ರೀಮಾತೆಯವರನ್ನು ಮೊದಲ ಬಾರಿ ಭೇಟಿಯಾದಾಗ ನನಗೆ ಬಹಳ ಸಣ್ಣ ವಯಸ್ಸು. ಶ್ರೀಮಾತೆಯವರನ್ನು ಅರ್ಥಮಾಡಿಕೊಳ್ಳುವ, ಅಥವಾ ಅರಿತುಕೊಳ್ಳುವ ಸಾಮರ್ಥ್ಯ ನನಗಿನ್ನೂ ಬಂದಿರಲಿಲ್ಲ. ಆಗ ನಾನು ನಿವೇದಿತಾ ಶಾಲೆಯಲ್ಲಿ ವಿದ್ಯಾರ್ಥಿನಿಯಾಗಿದ್ದೆ. ಆಗಿನ್ನೂ ನನಗೆ ಶ್ರೀಮಾತೆಯವರ ದರ್ಶನ ಪಡೆಯುವ ಸೌಭಾಗ್ಯ ಬಂದಿರಲಿಲ್ಲ, ಆಗಲೇ ನನಗಿಂತ ಮೊದಲು ವಿದ್ಯಾಭ್ಯಾಸ ಪಡೆಯಲು ಅಲ್ಲಿಗೆ ಬಂದು ಸೇರಿಕೊಂಡಿದ್ದ ಸ್ನೇಹಿತೆಯರಿಂದ ನಾನು ಶ್ರೀಮಾತೆಯವರ ಬಗ್ಗೆ ಕೇಳಿ ತಿಳಿದಿದ್ದೆ. ಅವರಲ್ಲಿ ಅನೇಕರಿಗೆ ಈ ಮೊದಲೇ ಶ್ರೀಮಾತೆಯವರನ್ನು ಕಾಣುವ, ಅವರೊಂದಿಗೆ ಮಾತನಾಡುವ, ಅವರ ಪ್ರೀತಿ-ಆದರಗಳಿಗೆ ಪಾತ್ರರಾಗುವ ಹಾಗೂ ಅವರ ಕೈಯಿಂದಲೇ ಅವರ ಪ್ರಸಾದವನ್ನು ಸ್ವೀಕರಿಸುವ ಸೌಭಾಗ್ಯವೊದಗಿ ಬಂದಿತ್ತು. ಅವರು ಅನೇಕ ಬಾರಿ ತಮ್ಮತಮ್ಮಲ್ಲೇ ಶ್ರೀಮಾತೆಯವರ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಅವರ ನಡುವೆ ನನ್ನದೇ ವಯಸ್ಸಿನ ಒಬ್ಬಾಕೆ ಹೇಳುತ್ತಿದ್ದಳು, ''ನಾನು ಇಂದು ಕನಸಿನಲ್ಲಿ ಶ್ರೀಮಾತೆಯವರನ್ನು ಕಂಡೆ.'' ಇನ್ನೊಬ್ಬಳು, ''ನನಗೆ ತುಂಬಾ ಕಷ್ಟ ಬಂದಾಗಲೆಲ್ಲ ನಾನು ಮನಸ್ಸಿನಲ್ಲೇ ಶ್ರೀಮಾತೆಯವರೊಂದಿಗೆ ಮಾತನಾಡುತ್ತೇನೆ. ಅವರಿಗೆ ಎಲ್ಲವನ್ನೂ ತಿಳಿಸುತ್ತೇನೆ. ಶ್ರೀಮಾತೆ ನನ್ನ ಬಳಿ ಮಾತನಾಡಿದಂತೆ, ನನ್ನ ಮೇಲೆ ತುಂಬಾ ಪ್ರೀತಿ ತೋರಿಸಿದಂತೆ ನನಗೆ ಅನ್ನಿಸುತ್ತದೆ'' ಎನ್ನುತ್ತಿದ್ದಳು. ಇದನ್ನೆಲ್ಲ ಕೇಳಿ ನನ್ನ ಮನಸ್ಸಿನಲ್ಲಿಯೂ ಅವರನ್ನು ನೋಡುವ ಇಚ್ಛೆ ಪ್ರಬಲವಾಗಿ ಉಂಟಾಗುತ್ತಿತ್ತು. ಅವರು ನೋಡಲು ಹೇಗಿರುತ್ತಾರೋ ಎಂದು ಮನಸ್ಸಿನಲ್ಲೇ ಚಿತ್ರಿಸಿಕೊಳ್ಳುತ್ತಿದ್ದೆ. ನನ್ನ ಎಳೆಯ ಮನಸ್ಸಿನಲ್ಲಿ ಶ್ರೀಮಾತೆಯವರೆಂದರೆ, ಆಶ್ಚರ್ಯಕರವಾದ ಅನುಭವದ ಪ್ರತ್ಯಕ್ಷ ರೂಪಿಣಿಯೇ ಆಗಿದ್ದಾರೆ ಎಂದು ಭಾವಿಸಿಕೊಳ್ಳುತ್ತಿದ್ದೆ. ಒಂದು ದಿನ ನನಗೂ ಶ್ರೀಮಾತೆಯವರನ್ನು ನೋಡುವ ಸೌಭಾಗ್ಯ ಹಠಾತ್ತನೆ ಒದಗಿ ಬಂತು.

ಆಗ ಶ್ರೀಮಾತೆಯವರು 'ಉದ್ಬೋಧನ'ದಲ್ಲಿದ್ದರು. ಅಕ್ಕ ಸುಧೀರಾ[೧] ನಮ್ಮ ಅಕ್ಕನ ಸ್ಥಾನವನ್ನು (ವಿದ್ಯಾಲಯದ ಅಧ್ಯಕ್ಷೆ) ಅಲಂಕರಿಸಿದ ನಂತರ, ಶಾಲೆ ಬಿಟ್ಟ ಬಳಿಕ ಯಾವಾಗಲೂ ಶ್ರೀಮಾತೆಯವರ ಬಳಿಗೆ ಹೋಗುತ್ತಿದ್ದಳು. ಅಂದು ಶಾಲೆ ಮುಗಿದ ನಂತರ ಕೆಲವು ಮಂದಿ ಹುಡುಗಿಯರನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋದಳು – ಅವರಲ್ಲಿ ನಾನೂ ಸೇರಿಕೊಂಡಿದ್ದೆ. ಅಂದು ನನಗೆ ಅದೆಂತಹ ಆನಂದವುಂಟಾಯಿತು ಎಂಬುದನ್ನು ಹೇಳಲು, ಅರ್ಥಮಾಡಿಸಲು ಸಾಧ್ಯವೇ ಇಲ್ಲ. ಶ್ರೀಮಾತೆಯವರನ್ನು ನೋಡಲು ಹೋಗುತ್ತಿದ್ದೇನೆ – ಅವರನ್ನು ಹೇಗೆ ನೋಡಬೇಕು? ಹೀಗೆ ಆಲೋಚನೆ ಮಾಡುತ್ತಲೇ ದಾರಿ ನಡೆದಿದ್ದೆ. ಶ್ರೀಮಾತೆಯವರು 'ಉದ್ಬೋಧನ'ದ ದೇವಾಲಯದ ಪಕ್ಕದಲ್ಲಿ, ರಸ್ತೆಯ ಕಡೆಗಿದ್ದ ವರಾಂಡದಲ್ಲಿ, ಬಾಗಿಲ ಬಳಿ ಕುಳಿತುಕೊಂಡಿದ್ದರು. ಅವರ ಸುತ್ತ ಕೆಲವು ಮಂದಿ ಮಹಿಳೆಯರು ಕುಳಿತಿದ್ದರು. ಅವರಲ್ಲಿ ಒಬ್ಬಾಕೆ ಯಾವುದೋ

---

೧ ಸುಧೀರಾ ಬಸು ನಿವೇದಿತಾ ಶಾಲೆಯಲ್ಲಿ ಸೋದರಿ ನಿವೇದಿತಾಳಿಗೆ ಮತ್ತೊಬ್ಬಳು ಸಹಾಯಕಿಯಾಗಿದ್ದಳು. ಅನಂತರ ವಿದ್ಯಾಲಯದ ಮುಖ್ಯಸ್ಥಳೂ ಆಗಿ ಜವಾಬ್ದಾರಿ ವಹಿಸಿಕೊಂಡಳು. ಶ್ರೀಮಾತೆಯವರ ಮತ್ತು ಸ್ವಾಮಿ ಶಾರದಾನಂದರ ಪ್ರೀತಿಗೆ ಅವಳು ಪಾತ್ರಳು ಆಗಿದ್ದಳು. ಅವಳ ಅಣ್ಣ, ಮಹರ್ಷಿ ಅರವಿಂದರ ಕ್ರಾಂತಿಕಾರಿ ಕೆಲಸಗಳಲ್ಲಿ ಸಹಕಾರಿಯಾಗಿದ್ದರು – ಮಾಣಿಕ್ ತಲಾ ಬಾಂಬ್ ದಾಳಿಯ ಆರೋಪಿಯಾಗಿದ್ದ ದೇವವ್ರತ ಬಸು ಮುಂದೆ ರಾಮಕೃಷ್ಣ ಮಹಾಸಂಘವನ್ನು ಸೇರಿಕೊಂಡರು. ಅವರ ಹೆಸರು ಸ್ವಾಮಿ ಪ್ರಜ್ಞಾನಂದ ಎಂದಾಗಿತ್ತು. ಉತ್ತಮ ಲೇಖಕರೂ ಕವಿಯೂ ಆಗಿದ್ದ ಅವರು ಕ್ರಾಂತಿಕಾರಿ ಪತ್ರಿಕೆ 'ಯುಗಾಂತರ'ದ ಸಂಪಾದಕರೂ ಆಗಿದ್ದರು. ಅವರು ಒಂದು ಬಾರಿ 'ಉದ್ಬೋಧನ'ದ ಸಂಪಾದಕರೂ ಆಗಿದ್ದರು. *(–ಸಂ.)*



ಒಂದು ಧಾರ್ಮಿಕ ಗ್ರಂಥವನ್ನು ಓದಿ ಹೇಳುತ್ತಿದ್ದಳು. ಓದಿನ ನಡುವೆ ಅವರು ಪುಸ್ತಕದ ವಿಷಯಕ್ಕೆ ಸಂಬಂಧಿಸಿದಂತೆ ಒಂದೆರಡು ಮಾತುಕತೆ ನಡೆಸುತ್ತ ಚರ್ಚೆಯನ್ನು ನಡೆಸುತ್ತಿದ್ದರು. ಶ್ರೀಮಾತೆಯವರು ಕೂಡ ಅವರೊಂದಿಗೆ ಚರ್ಚೆ ಮಾಡುತ್ತಿದ್ದರು. ಸುಧೀರಾ ಅಕ್ಕನೊಂದಿಗೆ ನಾವೆಲ್ಲರೂ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಒಂದು ಬದಿಯಲ್ಲಿ ಕುಳಿತೆವು. ಆಗ ಶ್ರೀಮಾತೆಯವರು ಸುಧೀರಾ ಅಕ್ಕನಿಗೆ, ''ಓ, ಸುಧೀರಾ! ಬಾಮ್ಮಾ, ಇವತ್ತು ಹೆಣ್ಣುಮಕ್ಕಳು ಕೂಡಾ ಬಂದಿದ್ದಾರೆ!'' ಎಂದರು. ಅನಂತರ ನಮ್ಮತ್ತ ನೋಡಿದರು. ಅವರ ಕಣ್ಣಿನ ಆ ನೋಟದಲ್ಲಿ ಹಾಗೂ ಅವರ ನಗುವಿನಲ್ಲಿ ಅದೆಂತಹ ಪ್ರೀತಿ ತುಂಬಿಕೊಂಡಿತ್ತು! ನಾನು ಅವರನ್ನು ಹೇಗೆ ಕಂಡಿದ್ದೆ ಎಂದು ಯಾರಾದರೂ ನನ್ನನ್ನು ಕೇಳಿದರೆ, ಅದಕ್ಕೆ ನಾನು ಉತ್ತರ ಕೊಡಲಾರೆ. ನನ್ನನ್ನೇ ನಾನು ಕಳೆದುಕೊಳ್ಳುವೆ. ಆ ಒಂದು ಅಪೂರ್ವ ಅನುಭವವನ್ನು ಭಾಷೆಯ ಮೂಲಕ ವರ್ಣಿಸಲಾಗದು. ಒಂದು ವಿಷಯವನ್ನು ಮಾತ್ರ ನಾನು ಹೇಳಬಲ್ಲೆ – ನನಗೆ ಎಷ್ಟೊಂದು ಆನಂದವುಂಟಾಯಿತೆಂದರೆ, ನಾನು ಅಲ್ಲಿದ್ದಷ್ಟು ಹೊತ್ತೂ ಮಂತ್ರಮುಗ್ಧಳಾದಂತೆ ಅವರತ್ತಲೇ ನೋಡುತ್ತಿದ್ದೆ. ಶ್ರೀಮಾತೆಯವರ ಸುತ್ತ ಕುಳಿತ ಹುಡುಗಿಯರೆಲ್ಲ ಶ್ರೀಮಾತೆಯವರು ತಮ್ಮವರೇ ಎಂಬಂತೆ, ತಮ್ಮಲ್ಲೇ ಒಬ್ಬರು ಎಂಬಂತೆ ಅನ್ನಿಸುತ್ತಿತ್ತು. ಶ್ರೀಮಾತೆಯವರು ತಮ್ಮ ಹಿರಿಮೆ-ಗರಿಮೆಗಳನ್ನು ಒಂದು ಬಿಂದುವಿನಷ್ಟೂ ಹೊರಗೆ ಪ್ರಕಟಿಸುತ್ತಿರಲಿಲ್ಲ; ಆದರೆ ಶ್ರೀಮಾತೆಯವರ ಸುತ್ತ ಅದೆಂಥ ಮಹಿಮೆ ಆವರಿಸಿಕೊಂಡಿತ್ತು! ಹೀಗೆ ಅವರು ಇಷ್ಟೊಂದು ಸ್ವಾಭಾವಿಕವಾಗಿ, ಎಲ್ಲರಲ್ಲಿ ಒಂದಾಗಿ ಇದ್ದರೂ, ಅವರು ಎಲ್ಲರಿಗಿಂತ ಬೇರೆಯೇ ಆಗಿದ್ದರು – ಸ್ವಲ್ಪವೂ ತಡವಿಲ್ಲದೆ ಈ ಅನುಭವ ನನಗಾಯಿತು.

ಇದರ ನಂತರ ಇನ್ನೂ ಕೆಲವು ಬಾರಿ ನನಗೆ ಶ್ರೀಮಾತೆಯವರ ದರ್ಶನ ಪಡೆಯುವ ಸೌಭಾಗ್ಯ ದೊರಕಿತು. ಎಲ್ಲದಕ್ಕಿಂತ ಹೆಚ್ಚಾಗಿ ಅವರ ಅದ್ಭುತ ಸರಳತೆ ಹಾಗೂ ಪ್ರತಿಯೊಬ್ಬರ ಮೇಲೆ ಕರುಣೆಯಿಂದ ಕೂಡಿದ ಪ್ರೀತಿ ವಿಶೇಷ. ಅವರು ಪ್ರೀತಿ, ಸ್ನೇಹಗಳ ಪ್ರತಿಮೂರ್ತಿಯೇ ಆಗಿದ್ದರು. ನೂರಾರು ಅಪರಾಧ, ಗ್ಲಾನಿಗಳಿಂದ ನಮ್ಮ ಮನಸ್ಸು ತುಂಬಿಕೊಂಡಿದೆ ಅನ್ನಿಸಿತ್ತು. ಶ್ರೀಮಾತೆಯವರು ತಾವಾಗಿಯೇ ನಮ್ಮ ಮನಸ್ಸಿನ ಗ್ಲಾನಿ, ತಾಪಗಳನ್ನು ದೂರ ಮಾಡುವುದಕ್ಕಾಗಿ ಕರುಣೆ ತುಂಬಿದ ಕಣ್ಣುಗಳಿಂದ ನಮ್ಮ ಮುಂದೆ ನಿಂತಿದ್ದರೋ ಎಂದು ಅನ್ನಿಸುತ್ತಿತ್ತು. ಅವರಲ್ಲಿ ಯಾವುದೇ ಅಸ್ವಾಭಾವಿಕತೆ, ಅಲೌಕಿಕತೆ ಕಂಡುಬರಲಿಲ್ಲ. ಅಷ್ಟೊಂದು ಸಹಜವಾಗಿ, ನಮ್ಮ ಮನೆಯಲ್ಲಿರುವ ತಾಯಿಯಂತೆಯೇ ಕಂಡುಬಂದರು. ಅವರು ಯಾವಾಗಲೂ ನಮ್ಮ ಒಳಿತಿಗಾಗಿ, ನಮ್ಮ ಸುಖ-ಸೌಕರ್ಯಕ್ಕಾಗಿ ಚಿಂತಿಸುತ್ತಿದ್ದರು. ಅಂತಹ ಸರಳತೆ ಅದೆಂಥ ಆಶ್ಚರ್ಯದ ಸಂಗತಿ! ಅವರು ತಮ್ಮ ಸರ್ವಸ್ವವನ್ನೂ ಠಾಕೂರರ ಪಾದಗಳಲ್ಲಿ ವಿಲೀನಗೊಳಿಸಿಬಿಟ್ಟಿದ್ದರು. 'ನಾನು' ಎಂಬ ಭಾವನೆಯನ್ನು ಸ್ವಲ್ಪವೂ ಅವರು ಸ್ಪರ್ಶ ಮಾಡುತ್ತಿರಲಿಲ್ಲ.

ಒಂದು ಸಲ ನಾನು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು 'ಉದ್ಬೋಧನ'ಕ್ಕೆ ಹೋಗಿದ್ದೆ. ಅಷ್ಟರಲ್ಲಿ ಒಬ್ಬ ವೃದ್ಧ ಮೈಥಿಲೀ ಬಡ ಬ್ರಾಹ್ಮಣ ಬಹಳ ದೂರದ ಊರಿನಿಂದ ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಅಲ್ಲಿಗೆ ಬಂದಿದ್ದ. ಅವನನ್ನು ಪ್ರಣಾಮ ಮಾಡುವುದಕ್ಕಾಗಿ ಮೇಲಂತಸ್ತಿಗೆ ಕರೆತಂದರು. ಅವನು ಶ್ರೀಮಾತೆಯವರ ಚರಣದರ್ಶನ ಮಾಡುವಾಗ ಭಾವೋದ್ವೇಗಕ್ಕೆ ಒಳಗಾಗಿ ಕಂಪಿಸಲಾರಂಭಿಸಿದ. ಕೈ ಮುಗಿದು, 'ಮಾತಾಜಿ, ಮಾತಾಜಿ' ಎಂದು ಮಾತ್ರವೇ ಹೇಳುತ್ತಿದ್ದ; ಬೇರೇನೂ ಹೇಳಲಾಗುತ್ತಿರಲಿಲ್ಲ. ಆ ಬ್ರಾಹ್ಮಣನು ಪ್ರಣಾಮ ಮಾಡಿ ಹೊರಟುಹೋದ ಮೇಲೆ ಶ್ರೀಮಾತೆಯವರು ವಿಸ್ಮಯದಿಂದ ಶ್ರೀರಾಮಕೃಷ್ಣರ ಭಾವಚಿತ್ರದ ಕಡೆಗೆ ನೋಡುತ್ತ ನಮಗೆ ಹೇಳಿದರು, ''ಅಹ! ಶ್ರೀರಾಮಕೃಷ್ಣರ ಮಹಿಮೆ ಎಂಥದು! ಯಾವುದೋ ದೂರದ ಊರಿನಿಂದ ಶ್ರೀರಾಮಕೃಷ್ಣರಿಂದ ಆಕರ್ಷಿತನಾಗಿ, ಅವರ ಬಳಿಗೇ ಬಂದ!'' ಠಾಕೂರರ ಈ ಬಗೆಯ ದಯೆಯನ್ನು ನೆನೆದು ಶ್ರೀಮಾತೆಯವರ ಮುಖದಲ್ಲಿ ಅದೆಂಥ ವಿಸ್ಮಯ, ಆನಂದ ಹಾಗೂ ಭಕ್ತಿಯ ಭಾವ ಹೊರಹೊಮ್ಮಿತ್ತೆಂದರೆ, ಆ ಚಿತ್ರವನ್ನು ಕಂಡ ನಾನು ಅದನ್ನು ಎಂದಿಗೂ ಮರೆಯಲಾರೆ. ಇಲ್ಲಿ ತಮ್ಮ ಬಗ್ಗೆ ಯಾವುದೇ ಆಲೋಚನೆ ಮಾಡುವುದು ಶ್ರೀಮಾತೆಯವರಿಗೆ ಸಾಧ್ಯವಿರಲಿಲ್ಲ. ಒಂದು ಕಡೆ ಅವರು ಎಷ್ಟು ಸರಳತೆಯ ಮೂರ್ತಿಯಾಗಿದ್ದರೋ. ಇನ್ನೊಂದೆಡೆ ಅವರಂತೆ ಅಸಾಧಾರಣ ವಿಚಾರಬುದ್ಧಿ-ಇದನ್ನು ಎಲ್ಲೂ ನೋಡುವುದು ಸಾಧ್ಯವಿಲ್ಲ. ಒಂದೆಡೆ ಅವರು ಬಾಲಕಿ

ಯಂತೆ ಸರಳ, ಲಜ್ಜಾಶೀಲೆಯಾದ ಕುಲವಧು; ಇನ್ನೊಂದೆಡೆ ಅವರು ಅಪರಾಜಿತಳಾದ ಶಕ್ತಿಮಯಿ! 'ಮಾಯೇರ್ ಕಥಾ' ಗ್ರಂಥವನ್ನು[೨] ಯಾರು ಓದುವರೋ ಅವರಿಗೆ ಶ್ರೀಮಾತೆಯವರ ಸ್ನೇಹಪೂರ್ಣವಾದ ಕೋಮಲ ಹೃದಯ, ಅವರ ಉಜ್ವಲ ತೇಜಸ್ಸು – ಇವನ್ನೆಲ್ಲ ಓದುತ್ತ ಆಶ್ಚರ್ಯವುಂಟಾಗುತ್ತದೆ. ಎಲ್ಲರೂ ಯಾರಾದರೂ ಒಬ್ಬ ವ್ಯಕ್ತಿಯನ್ನು ಹೆಡ್ಡನೆಂದು ದೂರ ಸರಿಸಿದರೂ, ಶ್ರೀಮಾತೆಯವರು ಅವನನ್ನೂ ತಮ್ಮ ಮಡಿಲಿಗೆಳೆದುಕೊಂಡರು. ಜನರು ಆಡುವ ಮಾತುಗಳು ಅವರ ಬಳಿ ತುಚ್ಛವೆನಿಸಿಕೊಂಡಿದ್ದವು. ಶರಣಾಗತರಾದವರು ಎಂತಹ ಅನ್ಯಾಯವನ್ನೇ ಮಾಡಲಿ, ಅವರು ತಮ್ಮ ಕೃಪಾಕಣದ ಲಾಭವನ್ನು ಪಡೆದು ಧನ್ಯರಾಗುವಂತೆ ಮಾಡುತ್ತಿದ್ದರು. ಶ್ರೀಮಾತೆಯವರು ಅಂತರ್ಯಾಮಿನಿಯಾಗಿದ್ದರು. ಅವರು ಎಲ್ಲರ ಒಳಗನ್ನೂ ನೋಡುತ್ತಿದ್ದರು. ಅವರೆಂದಿಗೂ ಬಾಹ್ಯ ಸಂಗತಿಗಳನ್ನು ನೋಡಿ ತಿಳಿದುಕೊಳ್ಳುತ್ತಿರಲಿಲ್ಲ.

ಸಿಸ್ಟರ್(ಸೋದರಿ ನಿವೇದಿತಾ) ಮಾಡಿದ ಬಲವಂತದಿಂದಾಗಿ ಒಂದು ದಿನ ಶ್ರೀಮಾತೆಯವರು ನಮ್ಮ ಶಾಲೆಗೆ(ಸೋದರಿ ನಿವೇದಿತಾಳ ಶಾಲೆ) ಬಂದರು. ದುರ್ಗಾಪೂಜೆಯ ಸಂದರ್ಭದಲ್ಲಿ ಮನೆಗೆ ದೇವಿಯ ಮೂರ್ತಿಯನ್ನು ತಂದಾಗ ನಾವು ಹೇಗೆ ಅಲಂಕಾರ ಇತ್ಯಾದಿ ಆಚರಣೆಗಳನ್ನು ಮಾಡುತ್ತೇವೋ, ಅದೇ ರೀತಿ ಸಿಸ್ಟರ್ ಕೂಡಾ ಅಂದು ದ್ವಾರದ ಬಳಿ ಮಂಗಲಘಟ, ಮಾವಿನ ಎಲೆಯ ತೋರಣ, ಎಳನೀರು, ಬಾಳೆಯಗಿಡ ಇತ್ಯಾದಿಗಳನ್ನು ಇಟ್ಟು ಸಿಂಗರಿಸಿದ್ದಳು. ಶ್ರೀಮಾತೆಯವರು ಗೋಲಾಪ್ ಮಾ ಮುಂತಾದವರೊಂದಿಗೆ ಬಂದು, ಶಾಲೆಯ ಮಹಾದ್ವಾರದ ಬಳಿ ಗಾಡಿಯಿಂದ ಇಳಿದರು. ಆಗ ಸಿಸ್ಟರ್ ಅಲ್ಲೇ ಮಂಡಿಯೂರಿ ಕುಳಿತು, ಶ್ರೀಮಾತೆಯವರ ಪಾದಗಳ ಮೇಲೆ ತಲೆಯಿಟ್ಟು ನಮಸ್ಕರಿಸಿದರು. ಶ್ರೀಮಾತೆ ಕೂಡ ಅತಿ ಹೆಚ್ಚಿನ ಪ್ರೀತಿಯಿಂದ ಸಿಸ್ಟರ್ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ಸಿಸ್ಟರ್ ಆ ಕ್ಷಣದಲ್ಲಿ ಭಾವಾವಿಷ್ಟಳಾಗಿದ್ದಳು. ಇನ್ನೊಮ್ಮೆ, ಸಿಸ್ಟರ್ ಜೊತೆಗೆ ದೋಣಿಯ ಮೂಲಕ ದಕ್ಷಿಣೇಶ್ವರದಿಂದ ಹಿಂದಿರುಗುವಾಗ ಕತ್ತಲಾಗಿತ್ತು. ಅಂದು ಸಿಸ್ಟರ್ ನಮಗೆ ಹೇಳಿದ್ದಳು: ''ಒಂದು ವೇಳೆ ಜಡಿಮಳೆ ಸುರಿದು, ದೋಣಿ ಮುಳುಗುವಂತಾದರೆ, ನಿಮಗೆ ಏನು ಅನ್ನಿಸುತ್ತಿತ್ತು ? ಭಯವಾಗುತ್ತಿತ್ತಲ್ಲವೆ? ಆದರೆ ನಾನು ಏನು ಬಯಸುತ್ತೇನೆ, ಗೊತ್ತೆ ? ನೀವು ಒಂದೇ ಮನಸ್ಸಿನಿಂದ, ಸಂಪೂರ್ಣವಾಗಿ ಶ್ರೀಮಾತೆಯವರನ್ನೇ ಆಶ್ರಯಿಸಿಕೊಂಡು ಚಿಕ್ಕ ಮಕ್ಕಳಂತಿರಬೇಕು. ಮಗು ಎಂಥ ಗಂಡಾಂತರ ಬಂದೊದಗಿದಾಗಲೂ ತಾಯ ಮಡಿಲಲ್ಲೇ ನಿರ್ಭಯವಾಗಿ ನಗುತ್ತಿರುತ್ತದೆ – ಹಾಗಿರಬೇಕು. ಏನೇ ಸಂಭವಿಸಲಿ, ಶ್ರೀಮಾತೆಯವರಿದ್ದಾರೆ, ನಾನೇನೂ ಚಿಂತೆ ಮಾಡಬೇಕಾಗಿಲ್ಲ, ಸ್ವಲ್ಪವೂ ಭಯಪಡಬೇಕಾಗಿಲ್ಲ.''

ಶ್ರೀಮಾತೆಯವರ ಮಾತುಗಳಿಗೆ ಕೊನೆಯೆಂಬುದಿಲ್ಲ. ಆದ ಕಾರಣ ಶ್ರೀಮಾತೆಯವರು ಬರೆದ ಒಂದು ಪತ್ರದಲ್ಲಿ ಅವರು ಹೇಳಿದ ಮಾತಿನ ಮೂಲಕವೇ ಕೊನೆಗೊಳಿಸುತ್ತೇನೆ. ಶ್ರೀಮಾತೆಯವರು ಒಬ್ಬಾಕೆ ದೀನ ಹೆಣ್ಣುಮಗಳಿಗೆ ಬರೆದಿದ್ದರು: ''ಅಮ್ಮ, ಭಗವಂತನೇ ಮನಸ್ಸಿನ ಸಂಪತ್ತು . ಎಲ್ಲೇ ಇರು, ಅವನನ್ನು ಅಂತರಂಗದಲ್ಲೇ ಕರೆಯಬೇಕು. ಯಾರು ಅವನನ್ನು ಅಂತರಂಗದಲ್ಲಿ ಕರೆಯುತ್ತಾರೋ, ಭಗವಂತನು ಅವನಿಗೇ ಸೇರಿದವನು.''[೩] ✽

೨ ಕನ್ನಡದಲ್ಲಿ 'ಶ್ರೀ ಶಾರದಾದೇವಿ ವಚನವೇದ' *(–ಅನು.)*

೩ 'ಆನಂದ ಬಜಾರ್ ಪತ್ರಿಕೆ' ಯ ೧೯೫೩ರ ಡಿಸೆಂಬರ್ ೨೧ರ ಸಂಚಿಕೆಯಲ್ಲಿ 'ಶ್ರೀಮಾತೆಯವರ ಮಾತುಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟಿತವಾದ ಈ ಸ್ಮೃತಿಲೇಖನದ ಕೊನೆಯ ಪ್ಯಾರಾದ ಹಿಂದಿನ ಪ್ಯಾರಾವನ್ನು ಲೇಖಕಿಯ 'ಭಗಿನಿ ನಿವೇದಿತಾ ಒ ತಾಹಾರ್ ಬಾಲಿಕಾ ವಿದ್ಯಾಲಯ' ಎಂಬ ಲೇಖನದಿಂದ ಸಂಗ್ರಹಿಸಲಾಗಿದೆ. *(–ಸಂ.)*

## ಕೆಡುಕೆಂಬುದೊಂದು ಭ್ರಾಂತಿ

**ಪ್ರಶ್ನೆ :** ನಿಜವಾಗಿ ನಾವು ಕೆಡುಕನ್ನು ನೋಡದಿರುವುದು ಹೇಗೆ ?

**ಸ್ವಾಮಿ ರಾಮದಾಸರು :** ಹೃದಯದಲ್ಲಿ ವಿಶ್ವಪ್ರೇಮವಿರುವವರು ಪ್ರಪಂಚದಲ್ಲಿ ಕೆಡುಕನ್ನು ನೋಡುವುದೇ ಇಲ್ಲ. ಎಲ್ಲ ಕೆಡುಕುಗಳನ್ನೂ ಹೃದಯದಿಂದ ದೂರ ಮಾಡಿದಾಗ ನಾವು ಎಲ್ಲೆಲ್ಲೂ ಒಳ್ಳೆಯದನ್ನು ಮಾತ್ರವೇ ನೋಡಬಲ್ಲೆವು. ಕೆಲವು ಸಂತರು ತಾವು ದಂಡಿಸಲ್ಪಟ್ಟಾಗಲೂ ಕೂಡ ಆ ದಂಡನೆಯನ್ನು ಕೆಟ್ಟದೆಂದು ಎಂದೂ ಪರಿಗಣಿಸಲಿಲ್ಲ. ಅವರು ಅದನ್ನು ದೇವರ ಅನುಗ್ರಹ ಅಥವಾ ಕೃಪೆಯೆಂದೇ ಸ್ವೀಕರಿಸಿದರು. ನೂರಾರು ವರ್ಷಗಳ ಹಿಂದೆ ಭಾರತದ ದಂಗೆಯ ಕಾಲದಲ್ಲಿ ಭಾರತದಲ್ಲಿ ಒಬ್ಬ ಸಂತನಿದ್ದನು. ಆಗ ತುಂಬ ಕೊಲೆಗಳಾಗುತ್ತಿದ್ದುವು. ಒಬ್ಬ ಪಾಶ್ಚಾತ್ಯ ಯೋಧನು ಅವನನ್ನು ಇರಿದನು. ಅವನು ಕೆಳಗೆ ಬಿದ್ದು ಕೊನೆಯುಸಿರು ಎಳೆಯುವಾಗ ಆ ಸೈನಿಕನನ್ನು ನೋಡುತ್ತಾ ಹೇಳಿದನು, '**ನೀನು ಅವನೇ!**' ಅವನು ತನ್ನನ್ನು ಕೊಂದವನಲ್ಲಿ ಯಾವ ಕೆಡುಕನ್ನೂ ನೋಡಲಿಲ್ಲ. ಅವನು ಅವನಲ್ಲಿ ದೇವರನ್ನು ನೋಡಿದಾಗ, ಕೆಡುಕನ್ನು ನೋಡಲು ಹೇಗೆ ಸಾಧ್ಯ? ಅದು ಎಂತಹ ದರ್ಶನ ! ಭಾರತದಲ್ಲಿ ದೊಡ್ಡ ಸಂತರು ಪಡೆದಿದ್ದ ಆದರ್ಶದ ಹಿರಿಮೆಯನ್ನು ಸಾರಲು ಈ ಕಥೆಯನ್ನು ಹೇಳುವುದರಲ್ಲಿ ಸ್ವಾಮಿ ವಿವೇಕಾನಂದರು ದಣಿವನ್ನೇ ಅರಿಯರು.

*(ಸ್ವಾಮಿ ರಾಮದಾಸರ ಸಂಭಾಷಣೆ, ಭಾಗ – ೪, ಪು. ೬೪–೬೫)*